ಎನ್.ವಿ. ಶ್ರೀನಿವಾಸ್, ಮೈಸೂರು

'ಲಂಚಂ ಶರಣಂ ಗಚ್ಛಾಮಿ' ಎಂಬ ಘೋಷವಾಕ್ಯ ಯಾವ ಇಲಾಖೆಗೆ ಹೆಚ್ಚು ಸೂಕ್ತ?



ಭ್ರಷ್ಟಾಚಾರ ನಿರ್ಮೂಲನಾ ಇಲಾಖೆಗೆ. ಲಂಚವಿಲ್ಲದಿದ್ದರೆ ಅವರು ನಿರುದ್ಯೋಗಿಗಳಾಗುವರಲ್ಲ!

ಯೆಚ್. ಕರಿಯಪ್ಪ, ಗುಲ್ಬರ್ಗ

ನಮ್ಮ ಪ್ರಶ್ನೆಗೆ ಉತ್ತರವನ್ನು ಎಷ್ಟು ದಿನ/ವಾರ/ತಿಂಗಳ ನಂತರ ನಿರೀಕ್ಷಿಸಬಹುದು?

ಹೇಳಿಬಿಟ್ಟರೆ ಸಸ್ಪೆನ್ಸ್ ಇರುವುದಿಲ್ಲವಲ್ಲ! ನಿರೀಕ್ಷೆಯಲ್ಲಿನ ಸುಖವೇ ಪರಮ ಸುಖ.

ಬಿ. ಚಂದ್ರೇಗೌಡ, ಬೆಂಗಳೂರು

ಆಶೀರ್ವಾದವೇ ಉಡುಗೊರೆ ಎನ್ನುವುದಕ್ಕೂ ಉಡುಗೊರೆಯೇ ಆಶೀರ್ವಾದ ಎನ್ನುವುದಕ್ಕೂ ಏನು ವ್ಯತ್ಯಾಸ?

ಅದು ಆತ್ಮನಿಗ್ರಹ, ಇದು ಪ್ರಾಮಾಣಿಕತೆ.

ರಮೇಶ ಜಿ. ಬೊಂಗಾಳೆ, ಬೈಲಹೊಂಗಲ

ಕಷ್ಟಕಾಲದಲ್ಲಿ ಯಾರು ಕೈ ಹಿಡಿಯುತ್ತಾರೆ ಸಾರ್?



ನಾಡಿ, ಬಿಪಿ ಚೆಕ್ ಮಾಡುವ ನರ್ಸ್.

ದೇವೇಂದ್ರ, ಕಡೂರು

ಹಣ ಇದ್ದವರಿಗಿಂತ ಏನೂ ಇಲ್ಲದವರೇ ನೆಮ್ಮದಿಯಾಗಿ ಇದ್ದಾರಲ್ಲಾ?

'ಏನೂ ಇಲ್ಲದವರೇ' ಎಂದರೆ ಮಾನ ಮರ್ಯಾದೆ ಇಲ್ಲದವರೆಂಬ ಅರ್ಥದಲ್ಲಿ ಮಾತ್ರ ನಿಮ್ಮ ಮಾತು ಸರಿ.

ರಾಜಶೇಖರ ಹಾದಿಮನಿ, ಧಾರವಾಡ

ಎಲ್ಲ ಸವಲತ್ತುಗಳಿರುವ ಜನಪ್ರತಿನಿಧಿಗಳಿಗೆ ಸಂಬಳ, ಪಿಂಚಣಿ ಏಕಿರಬೇಕು?

ಜಗದೀಶ್ವರನಿಗೇ ಕಾಣಿಕೆ ಕೊಡುತ್ತೇವಲ್ಲ. ಇರುವವರಿಗೇ ಕೊಡುವುದು ನಮ್ಮ ಪದ್ಧತಿ.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಕರೆಗಂಟೆ ಇದ್ದರೂ ಬಾಗಿಲು ಬಡಿಯುವುದನ್ನು ಬಿಡುವುದಿಲ್ಲವಲ್ಲಾ?

ಕರೆಗಂಟೆಯಷ್ಟು ಎತ್ತರಕ್ಕೆ ಕೈ ಎತ್ತಲಾಗದ ಸೈಕಲಾಜಿಕಲ್ ಫ್ರೋಜನ್ ಷೋಲ್ಡರ್ ಅಂತೆ.

ಬಾ.ರಂ. ಸುರೇಶ್, ಶಿವಮೊಗ್ಗ

ತಂದೆಯ ಮಾತಿಗೆ ರಾಮ ಕಾಡಿಗೆ ಹೋದ. ಈಗಿನ ಮಕ್ಕಳು ತಂದೆತಾಯಿಯನ್ನೇ ವೃದ್ಧಾಶ್ರಮಕಟ್ಟುವರಲ್ಲ?

ರಾಮ ಹೊರಟಾಕ್ಷಣ ದಶರಥ ಸತ್ತಂತೆ ಆಗಬಾರದೆಂಬ ಪಿತೃಪ್ರೀತಿ.

ಬಿ.ಎಸ್. ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

ಆಂಟಿಯರು ತಮ್ಮ ಸೌಂದರ್ಯವನ್ನು ಹೊರಚೆಲ್ಲುತ್ತಾರೆ. ಹುಡುಗಿಯರು ಮರೆಮಾಚುವರಲ್ಲಾ?

ಸಹಜವೇ; ಇದು ಮೊಗ್ಗು, ಅದು ಹೂವು.

ಶ್ರುತಿ ರಿಗ್ರೆಟ್ ಐಯ್ಯರ್, ನ್ಯೂಜರ್ಸಿ

ಹೊಸ ಅಡುಗೆ ಮಾಡಿ ಗಂಡಸರಿಗೇ ಕೊಡುವುದರ ಉದ್ದೇಶವೇನು?

ಯಾವುದೇ ಹೊಸ ಪ್ರಯೋಗವನ್ನು ಪಶುಗಳ ಮೇಲೆ ಕೈಗೊಳ್ಳುವುದು ವಿಜ್ಞಾನನಿಯಮ.

ಎಂ.ಜಿ. ನೇಹಹವರ್ಷಿಣಿ, ಬಳ್ಳಾರಿ

ಪರರನ್ನು ನಿಂದಿಸುವವ ಪರಮ ಪಾಪಿ. ಪರರಿಂದ ನಿಂದಿಸಿಕೊಳ್ಳುವವನು?

ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ತಾಲಿಬಾನ್; ಇದರ ನಿಜವಾದ ಅರ್ಥ?

ತಾಳ್ಮೆಯನ್ನೇ ಬ್ಯಾನ್ ಮಾಡಿರುವ ಒಂದು ಸಂಘ.

ಕೆ.ವಿ. ಗೋವಿಂದಾಚಾರಿ, ಮೈಸೂರು

ವರಮಹಾಲಕ್ಷ್ಮೀ ಹಬ್ಬಕ್ಕೆ ವಿಜೃಂಭಣೆಯ ಆಚರಣೆ. ಸರಸ್ವತಿ ಹಬ್ಬವೇಕೆ ಸರಳ?

ಏಕೆಂದರೆ ಲಕ್ಷ್ಮಿ ಬುದ್ಧಿ ಚಂಚಲಗೊಳಿಸುತ್ತಾಳೆ, ಸರಸ್ವತಿ ವಿವೇಕ ಕೊಡುತ್ತಾಳೆ.

## ವಾರದ ಪ್ರಶ್ನೆ

ಕಾವ್ಯಶ್ರೀ ಪತ್ರಿಮಠ, ಸುರಪುರ

ಪ್ರಾಣಿಗಳಲ್ಲಿರುವಷ್ಟು ಸಹನೆ, ತಾಳ್ಮೆ ಮಾನವರಲ್ಲಿ ಕಾಣುತ್ತಿಲ್ಲವಲ್ಲ, ಏಕೆ?

ಅವುಗಳಿಗೆ ಹಿಜಾಬ್, ಆಜಾನ್, ಭಜನೆ ಕೇಸರಿಶಾಲುಗಳ ಆಲೋಚನೆ ಇಲ್ಲ.

ಮಹಾವೀರ ಕಾಸರ, ಶಿವಮೊಗ್ಗ

ಮೊದಲ ಮಗು, ಮೊದಲ ಫಸಲು ಹುಲುಸಾಗಿರುವುದಿಲ್ಲ. ಏಕೆ?

ಕ್ಷೇತ್ರದ ಫಲವತ್ತತೆಯ ಸಾಂದ್ರತೆ ಅರಿಯದೆ ಗೊಬ್ಬರದ ಪ್ರಮಾಣದಲ್ಲಿ ಏರುಪೇರಾದುದರ ಫಲ.

ಮೋಹನರಾಜು ಎಸ್.ಎ., ಶಂಕರಘಟ್ಟ

ಜೀವನದ ರಂಗೋಲಿ ಸುಂದರ ಮತ್ತು ಪರಿಪೂರ್ಣವಾಗಬೇಕಾದರೆ ಎಷ್ಟು ಚುಕ್ಕಿಗಳನ್ನಿಡಬೇಕು?

ಹದಿನಾರು – ಒಂದೊಂದು ಚುಕ್ಕೆಯೂ ಷೋಡಶದ ಸಂಕೇತ. ಚಿತ್ತಾರವೇ ಬದುಕು.

ಎಚ್. ಸಿದ್ಧಾರ್ಥ ಹೆಬ್ಬಾರ್, ಈದು ಗ್ರಾಮ

ನಾಯಿ ಕಾವಲು ಕಾಯುವುದಕ್ಕೂ ಸರ್ಪ ಕಾವಲು ಕಾಯುವುದಕ್ಕೂ ಏನು ವ್ಯತ್ಯಾಸ?



ಸರ್ಪ ಸಾಹುಕಾರನಂತೆ; ಕೇವಲ ನಿಧಿ ಕಾಯುತ್ತದೆ. ನಾಯಿ ಗುಡಿಸಲನ್ನೂ ಕಾಯುತ್ತದೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ರೇಷನ್ ಕಾರ್ಡಿಗೆ ಹತ್ತು ಲೀಟರ್ ಬಿಯರ್ ಕೊಡುವುದಾಗಿ ಸರ್ಕಾರ ಹೇಳಿದರೆ?

ನೆಂಚಿಕೊಳ್ಳಲು ಉಪ್ಪಿನಕಾಯಿಭಾಗ್ಯ ನೀಡಲಿಲ್ಲವೆಂದು ವಿರೋಧಪಕ್ಷ ಸಂಪು ಹೂಡುತ್ತದೆ.

ಪಿ.ಜೆ. ರಾಘವೇಂದ್ರ, ಮೈಸೂರು

ಧನವನ್ನು ಕೂಡಿಡುವಂತೆ ತನು–ಮನಗಳನ್ನೂ ಕೂಡಿಡುವಂತಿದ್ದರೆ?

ಇವೆಯಲ್ಲ! ಮನಮನ ಕೂಡಿರುವುದೇ ಸಂಸ್ಕೃತಿ; ತನುತನು ಕೂಡಿರುವುದೇ ಸಮಾಜ.

■ ರಾಮ್